# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

## ಸಿ.ಸಿ. ನಂ. 1118/21

ಸಿ.ಡಬ್ಲ್ಯು 1
ಪಿ.ಡಬ್ಲ್ಯು 1

| | | |
|---|---|---|
| ಸಾಕ್ಷಿದಾರರ ಹೆಸರು | – | ಕುಸುಮಾ ಲಕ್ಕುಮನೆ |
| ಗಂಡನ ಹೆಸರು | – | ನಾಗೇಶ ಲಕ್ಕುಮನೆ |
| ವಯಸ್ಸು | – | 49 ವರ್ಷ |
| ಉದ್ಯೋಗ | – | ಗೃಹಿಣಿ |
| ವಾಸ್ತವ್ಯ | – | ಅಘನಾಶಿನಿ, ಕುಮಟಾ ತಾಲೂಕ |

(ಇಂದು ದಿನಾಂಕ 01-08-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ –ಮಾನ್ಯ ಸ.ಸ.ಅ. ರವರಿಂದ**

ನನಗೆ 1 ರಿಂದ 4 ನೇ ಆರೋಪಿತರ ಪರಿಚಯ ಇದೆ. ಅವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ದಿನಾಂಕ 25-12-2020 ರಂದು ರಾತ್ರಿ 8.30 ರಿಂದ 8.45 ಗಂಟೆ ಸುಮಾರಿಗೆ ನಾನು ಮತ್ತು ಚಾ.ಸಾ. 6 ಮನೆಯಲ್ಲಿದ್ದು, ಚಾ.ಸಾ.4 ರವರು ಮನೆಗೆ ಬರಲು ತಡವಾದ ಕಾರಣ ಅವರನ್ನು ನೋಡಿಕೊಂಡು ಬರಲು ಚಾ.ಸಾ. 6 ಹೋಗಿರುತ್ತಾರೆ. ನಂತರ ನಾನು ಮನೆಯಲ್ಲಿ ಒಬ್ಬಳೇ ಇದ್ದು ಒಣಗಲು ಹಾಕಿದ್ದ ಬಟ್ಟೆಗಳನ್ನು ತೆಗೆದುಕೊಂಡು ಬರುತ್ತಿದ್ದಾಗ ಆರೋಪಿತರು ನನ್ನನ್ನು ಅಡ್ಡಗಟ್ಟಿ ತಡೆದಿರುತ್ತಾರೆ. 3 ಮತ್ತು 4 ನೇ ಆರೋಪಿತರು ನನ್ನ ಕೈಯನ್ನು ಹಿಡಿದು ತಿರುವಿದ್ದು, 1 ನೇ ಆರೋಪಿಯು ನನಗೆ ಕೈಯಿಂದ ಮುಖದ ಮೇಲೆ ಹಲ್ಲೆ ಮಾಡಿರುತ್ತಾನೆ. 1 ಮತ್ತು 2 ನೇ ಆರೋಪಿತರು ನಾನು ಧರಿಸಿದ್ದ ಬಟ್ಟೆಯನ್ನು ಹರಿದಿರುತ್ತಾರೆ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಸಹ ಬೈದಿರುತ್ತಾರೆ. ಆರೋಪಿತರ ಪೈಕಿ 3 ಮತ್ತು 4 ನೇ ಆರೋಪಿತರು ಇತರ ಆರೋಪಿತರಿಗೆ ನನಗೆ ಹಲ್ಲೆ ಮಾಡುವಂತೆ ಪ್ರಚೋದನೆ ನೀಡುತ್ತಾ ನನ್ನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದರು. ನಾನು

ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದಾಗ ಅವರು ನನ್ನನ್ನು ದೂಡಾಡಿದ್ದು, ಆಗ ನನ್ನ ಹಣೆಗೆ ಪೆಟ್ಟಾಗಿರುತ್ತದೆ. ನಂತರ ಚಾ.ಸಾ.4 ಮತ್ತು 6 ರವರು ಗಲಾಟೆಯನ್ನು ಬಿಡಿಸಿದ್ದು, ಆರೋಪಿತರು ಹೋಗುವಾಗ ಜೀವಸಹಿತ ಬಿಡುವುದಿಲ್ಲವೆಂದು ಬೆದರಿಕೆಯನ್ನು ಹಾಕಿರುತ್ತಾರೆ. ನಂತರ ಮರುದಿನ ಠಾಣೆಗೆ ಹೋಗಿ ಫಿರ್ಯಾದನ್ನು ನೀಡಿರುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಫಿರ್ಯಾದನ್ನು ನಿ.ಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

ನಾನು ಫಿರ್ಯಾದನ್ನು ನೀಡಿದ ಮರುದಿನ ಅಂದರೆ ದಿನಾಂಕ 27-12-2020 ರಂದು ಪೊಲೀಸನವರು ಘಟನೆಯಾದ ಸ್ಥಳಕ್ಕೆ ಬಂದಿದ್ದು, ನಾನು ಅವರಿಗೆ ಘಟನೆಯಾದಂತಹ ಸ್ಥಳವನ್ನು ತೋರಿಸಿದ ಮೇರೆಗೆ ಪಂಚನಾಮೆಯನ್ನು ಜರುಗಿಸಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಪಂಚನಾಮೆಯ ಸಂದರ್ಭದಲ್ಲಿ ಪೊಲೀಸನವರು ಪೋಟೊವನ್ನು ತೆಗೆದಿದ್ದು, ಘಟನೆಯ ದಿನ ನಾನು ಧರಿಸಿದ್ದಂತಹ ಬಟ್ಟೆಯನ್ನು ಹಾಜರುಪಡಿಸಿದ ಮೇರೆಗೆ ಅದನ್ನು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ ಪಂಚನಾಮೆಯನ್ನು ಮತ್ತು ಪೋಟೊವನ್ನು ನಿ.ಪಿ.2 ಮತ್ತು 3 ಎಂದು, ಪಂಚನಾಮೆಯಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಪಂಚನಾಮೆಯ ಸಂದರ್ಭದಲ್ಲಿ ಪೊಲೀಸನವರು ಅಮಾನತ್ತುಪಡಿಸಿಕೊಂಡ ನೈಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನ್ಯಾಯಾಲಯದ ಸಮಕ್ಷಮ ಇರುವ ನೈಟಿಯನ್ನು ತೋರಿಸಲಾಗಿ ತಾನು ಹಾಜರುಪಡಿಸಿದ ನೈಟಿ ಸದರಿ ನೈಟಿ ಆಗಿರುವುದಿಲ್ಲವೆಂದು ನುಡಿದಿರುತ್ತಾರೆ.

ನಂತರ ಪೊಲೀಸನವರು ನನ್ನನ್ನು ಅಂಕೋಲಾದ ನ್ಯಾಯಾಧೀಶರ ಬಳಿ ಕರೆದುಕೊಂಡು ಹೋಗಿದ್ದು, ನಾನು ನ್ಯಾಯಾಧೀಶರ ಸಮಕ್ಷಮ ಘಟನೆಯ ವಿಚಾರವಾಗಿ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಹೇಳಿಕೆಯನ್ನು ನಿ.ಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಲಾದ ನೈಟಿಯು ಹಸಿರು ಬಣ್ಣದ್ದಾಗಿದ್ದು, ಆದರೆ ಮಾಲು ಪಟ್ಟಿಯಲ್ಲಿ ಹಾಗೂ ಪಂಚನಾಮೆಯಲ್ಲಿ ಕೆಂಪು ಬಿಳಿ ಗುಲಾಬಿ ಬಣ್ಣದ ನೈಟಿ ಎಂದು ವಿವರಿಸಲಾಗಿದ್ದು, ಆ ಬಗ್ಗೆ ಸೂಕ್ತ ವಿವರಣೆಯನ್ನು ಕೋರಿ ತನಿಖಾಧಿಕಾರಿ/ ಅಮಾನತ್ತುಪಡಿಸಿಕೊಂಡಂತಹ ಅಧಿಕಾರಿಯವರಿಗೆ ನೋಟಿಸ್ ನೀಡುವಂತೆ ಆದೇಶ ಪುಟದಲ್ಲಿ ಆದೇಶ ಮಾಡಲಾಗಿದ್ದು, ಆ ಬಗ್ಗೆ ವಿವರಣೆ ಬಂದ ನಂತರ ಸಾಕ್ಷಿದಾರರ ಮುಂದುವರಿದ ಮುಖ್ಯ ವಿಚಾರಣೆ ಮಾಡುವುದು ಸೂಕ್ತ ಎಂದು ಕಂಡು ಬಂದ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾದಂ. ಕುಮಟಾ